## ಮಹಾರಾಜರ ಆಸ್ಥಾನ!

ಹೈದರಾಬಾದಿನಲ್ಲಿರುವ ರಾಮೋಜಿ ರಾವ್ ಫಿಲ್ಮ್‌ಸಿಟಿ (ಚಿತ್ರನಗರಿ) ಅತ್ಯಂತ ದೊಡ್ಡ ಸಂಘಟಿತ ಚಲನಚಿತ್ರ ಸ್ಟುಡಿಯೋ ಸಂಕೀರ್ಣ. ಇಲ್ಲಿ 20 ಅಂತರರಾಷ್ಟ್ರೀಯ ಹಾಗೂ 40 ಭಾರತೀಯ ಚಲನಚಿತ್ರಗಳನ್ನು ಏಕಕಾಲದಲ್ಲಿ ನಿರ್ಮಿಸಬಹುದು. ಚಲನಚಿತ್ರದ ಸೆಟ್ ಮಾದರಿಗಳು ಗಮನ ಸೆಳೆಯುತ್ತವೆ. ಮಹಾರಾಜರ ಆಸ್ಥಾನದ ಮಾದರಿ ಅದ್ಭುತವಾಗಿದ್ದು, ಆಸ್ಥಾನದಲ್ಲಿ ಮಂತ್ರಿಗಳ ಮಾದರಿಗಳೂ ಇವೆ.

**-ಪ್ರಕಾಶ ಎಸ್.ಮನ್ನಂಗಿ, ಹಾವೇರಿ**





## ವಂಕಲಕುಂಟಿ ಕೇಳಿಕೆ ಗುಂಡು

ಕೊಪ್ಪಳ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿಗೆ ಹೊಂದಿರುವ ಯಲಬುರ್ಗಿ ತಾಲ್ಲೂಕಿನ ಚಿಕ್ಕವಂಕಲಕುಂಟಿ ಗ್ರಾಮದ ಪ್ರಶಾಂತ ಪರಿಸರದಲ್ಲಿ ಮಾರುತಿ ದೇವಾಲಯವಿದೆ. ಅಲ್ಲಿನ ಗುಡಿಯ ಎದುರಿನಲ್ಲಿ ಸಣ್ಣ ಕಲ್ಲುಕಂಬವಿದ್ದು, ಅದರ ಮೇಲೆ ಸಣ್ಣದಾದ ಕಲ್ಲಿನ ಗುಂಡು ಇದೆ. ಭಕ್ತರು ತಮ್ಮ ಇಷ್ಟಾರ್ಥ ಸಿದ್ಧಿಯಾಗುವುದೇ ಎಂದು ಕೇಳಲು ಈ ಸಣ್ಣ ಗುಂಡನ್ನು ಎರಡು ಕೈಗಳಲ್ಲಿ ಹಿಡಿದು ತಿರುಗಿಸುತ್ತಾ, ಈ ಕಲ್ಲ ಕಂಬವನ್ನು ಸುತ್ತುತ್ತಾರೆ. ಈ ಗುಂಡು ಸರಾಗವಾಗಿ ತಿರುಗಿದರೆ ತಮ್ಮ ಕಾರ್ಯವು ಈಡೇರುವುದೆಂದು ನಂಬುತ್ತಾರೆ.

**-ಡಾ.ಮಲ್ಲಿಕಾರ್ಜುನ ಕುಂಬಾರ, ರಾಜೂರ**

## ಬೃಹತ್ ಆಂಜನೇಯ ವಿಗ್ರಹ

ಈ ಆಜಾನುಬಾಹು ಆಂಜನೇಯನನ್ನು ಗಂಗಾವತಿಯ ರಾಯಚೂರು ಹೆದ್ದಾರಿಯ ಜಂಗಮರ ಕಲ್ಗುಡಿಯಲ್ಲಿ ಕಾಣಬಹುದು. ಈ ರಸ್ತೆಯು ಸದಾ ಸಂಚಾರ ದಟ್ಟಣೆಯಿಂದ ಕೂಡಿರುತ್ತದೆ. ಊರಿನ ಜನರೆಲ್ಲಾ ಸೇರಿ ಅಜಾನುಬಾಹು ಆಂಜನೇಯನ ಬೃಹತ್ ಮೂರ್ತಿ ಸ್ಥಾಪಿಸುವ ನಿರ್ಧಾರ ಮಾಡಿ 53 ಅಡಿಯ ಆಂಜನೇಯನ ಮೂರ್ತಿಯನ್ನು ರಸ್ತೆಯ ಪಕ್ಕ ಸ್ಥಾಪಿಸಿದ್ದಾರೆ.

**-ಜೆ.ಸಿ.ಜಾಧವ, ಗಂಗಾವತಿ**

